**(ದಿನಾಂಕಃ 26.03.2018 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

**<u>ಪಾಟೀ ಸವಾಲು ವಾದಿ ಪರ ಶ್ರೀ ಎಸ್.ಎನ್.ಜಿ ವಕೀಲರಿಂದಃ</u>**

ನಮ್ಮ ಕಂಪನಿ 2005 ರಲ್ಲಿ ಸ್ಥಾಪನೆ ಆಗಿದ್ದು ಆದರೆ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ. ನಮ್ಮ ಕಂಪನಿ ಸಾಮಾನ್ಯ ವಿಧ್ಯಾಭ್ಯಾಸದ ಉದ್ದೇಶಕ್ಕಾಗಿ ಸ್ಥಾಪನೆಯಾಗಿದೆ. ಈಗ ನಮ್ಮ ಕಂಪನಿ ಬೆಂಗಳೂರಿನ ಹೆಚ್ ಎ ಎಲ್ ಏರ್ ಪೋರ್ಟ್ ರಸ್ತೆಯಲ್ಲಿ Asian Institute of Design vocational training institute ನ್ನು ನಡೆಸುತ್ತಿದೆ. ಸದರಿ Institute 2007 ರಲ್ಲಿ ಪ್ರಾರಂಭ ಮಾಡಲು ತೆಗೆದುಕೊಂಡಿದ್ದು 2008 ಕ್ಕೆ Institute ಪ್ರಾರಂಭವಾಗಿರುತ್ತದೆ.

ನಮ್ಮ ಕಂಪನಿ ಸ್ಥಾಪನೆಯಾದಾಗ ಕಂಪನಿಯ ಡೈರೆಕ್ಟರ್ ಯಾರಾಗಿದ್ದರು ಮತ್ತು ಎಷ್ಟು Directors ಇದ್ದರು ಎಂದರೆ ಸಾಕ್ಷಿಯು ಲಫೀರ್ ಮೊಹಮ್ಮದ್, ಡಾಃ ಅಬ್ದುಲ್ಲಾ ಸಭಾಯಿ, ಆಸಿಫ್ ಇಕ್ ಬಾಲ್, ಮೊಹಮದ್ ಶರೀಫ್ ಅವರುಗಳು ಆ ಸಮಯದಲ್ಲಿ Directors ಆಗಿದ್ದರು. ಮೇಲೆ ಹೇಳಿದ Directors ಪೈಕಿ ಆಸಿಫ್ ಇಕ್ ಬಾಲ್ ಮತ್ತು ಮೊಹಮದ್ ಶರೀಫ್ ಅವರು ಈಗ ಬದಲಾವಣೆ ಆಗಿದ್ದು ಈಗ ಅವರ ಬದಲಾಗಿ ನಾನು ಮತ್ತು ಮಸೂರ್ ಅಲ್ ಸುನೇಡಿ, ಅಲಿ ಅಲ್ ಅರೇಮಿ Directors ಆಗಿರುತ್ತೇವೆ.

ಹೊಸ Directors ಬದಲಾವಣೆಯಾಗಿರುವ ಬಗ್ಗೆ Register of companies ಗೆ ತಿಳಿಸಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೋ ಇಲ್ಲವೋ ಗೊತ್ತಿರುವುದಿಲ್ಲ.

Directors ಬದಲಾವಣೆ ಯಾವ ದಿನಾಂಕದಂದು ಆಗಿರುತ್ತೇವೋ ಎಂದು ಸರಿಯಾಗಿ ಗೊತ್ತಿರುವುದಿಲ್ಲ. ನಮ್ಮ ಕಂಪನಿ Directors ಅವರು ತಮ್ಮ ಸ್ವಂತ ಬಂಡವಾಳವನ್ನು ಹಾಕಿ ನಡೆಸುತ್ತಿದ್ದಾರೆ ಸಾರ್ವಜನಿಕರು ಪಾಲ್ಗೊಂಡಿರುವುದಿಲ್ಲ. ಮೊದಲು ಎರಡು Directors ಒಂದು ಲಕ್ಷ ಬಂಡವಾಳ ಹಾಕಿ ಕಂಪನಿ ಸ್ಥಾಪನೆ ಮಾಡಿರುತ್ತಾರೆ. ಆಸಮಯದಲ್ಲಿ ಕಂಪನಿಯ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ. ಕಂಪನಿ ಸ್ಥಾಪನೆ ಮಾಡಿ ಅದೇ ವರ್ಷದಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ದಾವಾ ಆಸ್ತಿ ಖರೀದಿ ಮಾಡುವಾಗ ಕ್ರಯದ ಹಣ ಕೊಡಲು ಎಲ್ಲಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು Directors ಅವರು ತಮ್ಮ ಸ್ವಂತ ಬಂಡವಾಳವನ್ನು ಕಂಪನಿಗೆ ಹಾಕಿದ್ದು ನಂತರ ಕಂಪನಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತೇವೆ. ಕಂಪನಿಯ Directors ಮೊದಲು ಏನಾಗಿದ್ದರು ಎಂದರೆ ಸಾಕ್ಷಿಯು ಲಫೀರ್ ಮೊಹಮ್ಮದ್ ಅವರು ಎನ್ ಆರ್ ಐ ಆಗಿದ್ದು ಅವರು ಹೊರದೇಶದಲ್ಲಿ ವಿಧ್ಯಾಸಂಸ್ಥೆ ನಡೆಸುತ್ತಿದ್ದರು. ಡಾಃ ಅಬ್ದುಲ್ಲಾ ಸಭಾಯಿ Foreign National ಆಗಿದ್ದು ಅವರು ಕೂಡ ಹೊರದೇಶದಲ್ಲಿ ವಿಧ್ಯಾಸಂಸ್ಥೆ ನಡೆಸುತ್ತಿದ್ದರು. ನಿ.ಡಿ.2 ರ ಪ್ರಕಾರ ಇಬ್ಬರೇ Directors ಇದ್ದರು ಎಂದರೆ ಸರಿ. ಮೇಲೆ ಹೇಳಿದ ಇನ್ನಿಬ್ಬರು Directors ಕಂಪನಿಗೆ ಯಾವಾಗ ಸೇರಿದ್ದರು ಮತ್ತು ROC ಅವರಿಗೆ ಯಾವಾಗ ತಿಳಿಸಿರುತ್ತೀರಾ ಎನ್ನುವ ಬಗ್ಗೆ ದಾಖಲೆ ಹಾಜರುಮಾಡಿರುತ್ತೇನಾ ಎಂದರೆ ದಾಖಲೆ ಹಾಜರುಮಾಡಿರುವುದಿಲ್ಲ.

ಶುರುವಿನಲ್ಲಿ ಒಂದು ಲಕ್ಷ ಬಂಡವಾಳ ಮಾಡಿದ ನಂತರ Directors

ಅವರ ವಯಕ್ತಿಕ ಹಣವನ್ನು ಕಂಪನಿಗೆ ಬಂಡವಾಳವಾಗಿ ಹಾಕಿದ್ದ ಬಗ್ಗೆ ROC ಗೇ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ನಾವು Tax Annual Returns ರಲ್ಲಿ ಉಲ್ಲೇಖ ಮಾಡಿದ್ದು ಅದನ್ನು ROC ಗೆ ಸಲ್ಲಿಸುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುವುದಿಲ್ಲ. 2008 ರಲ್ಲಿ ವಿದ್ಯಾಸಂಸ್ಥೆ ಸ್ಥಾಪನೆಯಾದ ಬಗ್ಗೆ ದಾಖಲೆಯನ್ನು ನ್ಯಾಯಾಲಕ್ಕೆ ಹಾಜರುಮಾಡಿರುವುದಿಲ್ಲ. ROC ಗೆ ನಾವು ಸಲ್ಲಿಸುತ್ತಿದ್ದ ದಾಖಲೆ ಮತ್ತು 2005 ರಿಂದ ಇಲ್ಲಿಯವರೆಗೂ ROC ಗೆ ಸಲ್ಲಿಸುತ್ತಿದ್ದ ದಾಖಲೆ ಹಾಗೂ ಸಂಸ್ಥೆ ಸ್ಥಾಪನೆ ಮಾಡಿದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು 8 ವರ್ಷ ಮಾತ್ರ ನಾವು ROC ಗೆ ಸಲ್ಲಿಸಿದ ದಾಖಲೆಗಳನ್ನು ಇಟ್ಟುಕೊಂಡಿರುತ್ತೇವೆ ಹಾಗಾಗಿ ದಾಖಲೆಗಳನ್ನು ಇಟ್ಟು ಕೊಂಡಿರುತ್ತೇವಾ ಎಂದು ಪರಿಶೀಲನೆ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಖರೀದಿ ಮಾಡಿದ ಸಂಬಂಧಪಟ್ಟಂತೆ ನಮ್ಮ ಕಂಪನಿಯ ದಾಖಲಾತಿಗಳಲ್ಲಿ ಪರಿಶೀಲನೆ ಮಾಡಿರುತ್ತೀರಾ ಎಂದರೆ ಮಾಡಿರುತ್ತೇವೆ. ನನಗೆ ಸಾಕ್ಷಿ ನುಡಿಯಲು ಅಧಿಕಾರ ಕೊಟ್ಟಾಗ ನಮ್ಮ ಕಂಪನಿಯ ಒಟ್ಟು 4 Directors ಇದ್ದೆವು. ನನಗೆ ಸಾಕ್ಷಿ ನುಡಿಯಲು ಆ 4 Directors Resolutions ಮಾಡಿ ಅಧಿಕಾರ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಎಂದುನುಡಿಯುತ್ತಾರೆ. ನಿ.ಡಿ.1 ನಾಲ್ಕು Directors ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದು Extract ಆಗಿದ್ದು ಹಾಗಾಗಿ ಇಬ್ಬರು Directors ಮಾತ್ರ ಸಹಿ ಮಾಡಿರುತ್ತಾರೆ ಎಂದುನುಡಿಯುತ್ತಾರೆ.

ನನ್ನನ್ನು ಸಾಕ್ಷಿ ನುಡಿಯಲು ಅಧಿಕಾರ ಕೊಟ್ಟ Resolutions ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇರುವುದಿಲ್ಲ. ನಾನು ನಿ.ಡಿ.1 ರ ಪ್ರಕಾರ ನಾನು ಕಂಪನಿಯ ಒಂದು Director ಮತ್ತು Vice President of Finance ಎಂದರೆ ಸರಿ. ನಿ.ಡಿ.1 ರಂತೆ ಯಾವ ದಿನಾಂಕದಂದು ನನಗೆ ಅಧಿಕಾರ ಕೊಟ್ಟಿರುತ್ತಾರೆ ಎಂದರೆ ನೆನಪಿರುವುದಿಲ್ಲ. ನಿ.ಡಿ.1 Extract ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವ್ಯಾಜ್ಯ ಇರುವ ಬಗ್ಗೆ ROC ಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ರ ಪ್ರಕಾರ ಕಂಪನಿಯನ್ನು ಸಾರ್ವಜನಿಕರ Investment ಒಳಪಟ್ಟು ಸ್ಥಾಪನೆಯಾಗಿರುವ ಕಂಪನಿ ಎಂದರೆ ಸರಿ. ನಿ.ಡಿ.2 ಪ್ರಕಾರ ಎಲ್ಲಾ ವ್ಯವಹಾರಗಳ ವಿಷಯಗಳನ್ನು ನಾವು ROC ಗೆ ಮಾಹಿತಿ ನೀಡಬೇಕು ಎಂದರೆ ಸಾಕ್ಷಿಯು ಕಾನೂನು ಪ್ರಕಾರ ಕಾಲಕಾಲಕ್ಕೆ ನೀಡುತ್ತೇವೆ ಎಂದುನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಸಮಯವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಎಂ.ಒ

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.